**ಪಿ.ಡಬ್ಲ್ಯು–2**

**ಸಾಕ್ಷಿಯನ್ನು ದಿನಾಂಕಃ  14.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಐ.ಎಸ್, ವಕೀಲರಿಂದಃ**

ನಾನು 1999 ರಿಂದ ವಕೀಲ ವೃತ್ತಿ ಮಾಡುತ್ತಿದ್ದು, 2007 ರಿಂದ ವಕೀಲ ವೃತ್ತಿಯ ಜೊತೆಗೆ ರಾಜ್ಯ ಸರ್ಕಾರದ ನೋಟರಿ ಪಬ್ಲಿಕ್ ಆಗಿ ಕೆಲಸ ಮಾಡುತ್ತಿದ್ದೇನೆ. ಯಾವುದೇ ದಾಖಲೆಗೆ ನೋಟರಿ ಮಾಡುವ ಸಮಯದಲ್ಲಿ ಪಕ್ಷಗಾರರ ಸಮಕ್ಷಮ ನೋಟರಿ ಮಾಡಿ ರಿಜಿಸ್ಟರ್ ನಲ್ಲಿ ನಮೂದು ಮಾಡಿ, ನಂಬರ್ ನೀಡುತ್ತೇನೆ ಎಂದರೆ ಸರಿ. ನಾನು ಮತ್ತು ದೇವಪುತ್ರ ಎಂಬುವವರು ಒಂದು ರಾಜಕೀಯ ಪಕ್ಷದಲ್ಲಿ ಗುರುತಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಬಿ.ಜೆ.ಪಿ ಪಕ್ಷದ ತಾಲ್ಲೂಕು ಮಟ್ಟದ ಅಧ್ಯಕ್ಷನಾಗಿದ್ದೆ, ಆದರೆ ಈಗ ಯಾವುದೇ ಹುದ್ದೆಯನ್ನು ಕೊಟ್ಟಿರುವುದಿಲ್ಲ. ಕರಾರುಪತ್ರವಾಗುವ ಸಮಯದಲ್ಲಿ ನಾನು ತಾಲ್ಲೂಕು ಮಟ್ಟದ ಅಧ್ಯಕ್ಷನಾಗಿದ್ದೆ ಎಂದರೆ ಸರಿಯಲ್ಲ. ನಿಪಿ-18 ರಲ್ಲಿ ನೋಟರಿ ಮಾಡಿದ ಬಗ್ಗೆ ರಿಜಿಸ್ಟರ್ ನಂಬರನ್ನು ನಮೂದಿಸಿಲ್ಲ, ಏಕೆಂದರೆ ಸುಮ ಮತ್ತು ಸೌಭಾಗ್ಯ ಎಂಬುವವರು ಬಂದಿರಲಿಲ್ಲವಾದ್ದರಿಂದ ಸದರಿ ದಾಖಲೆಗೆ ನೋಟರಿ ಮಾಡಿಸಲು ಅಪೂರ್ಣವಾಗಿದ್ದರಿಂದ ನಾನು ನಂಬರನ್ನು ನೀಡಿಲ್ಲ. ನಿಪಿ-18 ಅಪೂರ್ಣವಾದ ದಾಖಲೆಯಾಗಿರುತ್ತದೆ ಎಂದರೆ ಸುಮ ಮತ್ತು ಸೌಭಾಗ್ಯರವರು ಸಹಿ ಹಾಕದೇ ಇರುವುದರಿಂದ ಸದರಿ ದಾಖಲೆ ಅಪೂರ್ಣವಾಗಿರುತ್ತದೆ. ನಿಪಿ-18 ಕ್ಕೆ ನೋಟರಿ ಮಾಡುವ ಸಮಯದಲ್ಲಿ ಮಾದಯ್ಯರವರಿಗೆ ಇನ್ನೂ ಕೆಲವರು ವಾರಸುದಾರರು ಇರುತ್ತಾರೆ ಎಂದು ಖಚಿತಪಡಿಸಿಕೊಂಡಿರುತ್ತೀರಾ ಎಂದರೆ ಅವರು ನೀಡಿದ ಮಾಹಿತಿಯ ಮೇರೆಗೆ ನಾನು ನೋಟರಿ ಮಾಡಿರುತ್ತೇನೆ. ನಿಂಗಮ್ಮರವರು ನನಗೆ ಮಾಹಿತಿ ನೀಡುವಾಗ ಎಲ್ಲರೂ ಬಂದಿರುತ್ತಾರೆಂದು ಮಾಹಿತಿ ನೀಡಿದ್ದರಿಂದ ನಿಪಿ-18 ಕ್ಕೆ ನೋಟರಿ ಮಾಡಿರುತ್ತೇನೆ, ಆದರೆ ನಂತರ ಅದನ್ನು ಪರಿಶೀಲಿಸಿದಾಗ ಈ ಮೇಲೆ ಹೇಳಿದ ಸುಮ ಮತ್ತು ಸೌಭಾಗ್ಯರವರು ಬಂದಿರಲಿಲ್ಲವಾದ್ದರಿಂದ ಸದರಿ ದಾಖಲೆಯನ್ನು ನನ್ನ ಬಳಿಯೇ ಇಟ್ಟುಕೊಂಡಿದ್ದೆ. ದೇವಪುತ್ರ ನನಗೆ ಪರಿಚಯವಿರುತ್ತಾರೆ. ದೇವಪುತ್ರ ಎಂಬುವವರು ಖಾತೆ ಮಾಡಿಕೊಡುವುದಾಗಿ ನಂಬಿಸಿ

ಖಾಲಿ ಛಾಪಾಕಾಗದಕ್ಕೆ ಪ್ರತಿವಾದಿಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 25.01.2014 ರಂದು 1 ನೇ ಪ್ರತಿವಾದಿ ತಮ್ಮ ವಕೀಲರ ಮೂಲಕ ನೋಟಿಸ್ ನೀಡಿ ಖಾತೆ ಮಾಡಿಸಿಕೊಡುತ್ತೇವೆಂದು ಹೇಳಿ ಕರಾರುಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ನೋಟಿಸ್ ಕೊಟ್ಟಿರುತ್ತಾರೆ, ಆದರೆ ಸದರಿ ನೋಟಿಸ್ ನಲ್ಲಿ ಈ ಬಗ್ಗೆ ನ್ಯಾಯಾಲಯಕ್ಕೆ ಬಂದು ಸ್ಪಷ್ಟನೆ ಕೊಡಬೇಕಾಗುತ್ತದೆಂದು ಹೇಳಿರುವುದರಿಂದ ನಾನು ನ್ಯಾಯಾಲಯಕ್ಕೆ ಬಂದು ಸ್ಪಷ್ಟನೆ ಕೊಡುವ ಉದ್ದೇಶದಿಂದ ಸದರಿ ನೋಟಿಸ್ ಗೆ ಪ್ರತ್ಯುತ್ತರ ನೀಡಿರುವುದಿಲ್ಲ. 1 ನೇ ಪ್ರತಿವಾದಿ ದಿನಾಂಕ 17.01.2014 ರಂದು ದೇವಪುತ್ರ, ಮರಿಸ್ವಾಮಿ ಮತ್ತು ನನ್ನ ವಿರುದ್ಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ. ಈ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ದಾಖಲೆ ನಾನು ಪೊಲೀಸ್ ಠಾಣೆಯಲ್ಲಿ ನೀಡಿರುವ ಹೇಳಿಕೆ ದಾಖಲೆಯಾಗಿರುತ್ತದೆ. ಸಾಕ್ಷಿಯು ಹೇಳಿಕೆ ದಾಖಲೆಯನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಿದ್ದಮ್ಮರವರು ಅಕ್ರಮವಾಗಿ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ನನ್ನ ಬಳಿ ಬಂದು ವಾಸ್ತವಾಂಶವನ್ನು ಮರೆಮಾಚಿ ಕರಾರು ಪತ್ರವನ್ನು ಸೃಷ್ಟಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**